ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 01-04-1978.

# *ನಿರಂತರ ಯೋಗಿಯೇ ನಿರಂತರ ಜೊತೆಗಾರರಾಗಿದ್ದಾರೆ*

(निरन्तर योगी ही निरन्तर साथी है)

***ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.***

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

***ಲಂಡನ್ ಸೇವಾ ಕೇಂದ್ರದ ಪ್ರಮುಖರಾದ ಜಾನಕಿ ದಾದಿ ಮತ್ತು ಇತರ ಮಹಾರಥಿ ಅಣ್ಣಂದಿರು ಮತ್ತು ಅಕ್ಕಂದಿರೊಂದಿಗೆ ಅವ್ಯಕ್ತ ಬಾಪ್‌ದಾದಾ ಮಾತನಾಡಿರುವ ಮಹಾವಾಕ್ಯಗಳು.***

ಇಂದು ಮಾಯಾಜೀತ್ ವಿಜಯಿರತ್ನಗಳ ವಿಶೇಷ ಸಂಘಟನೆ ಇದೆ. ಇಂದಿನ ಸಂಘಟನೆಯಲ್ಲಿ ಬಾಪ್‌ದಾದಾ ಯಾರನ್ನು ನೋಡುತ್ತಿದ್ದಾರೆ- ಯಾರು ಆದಿಯಿಂದ ಅಂತ್ಯದವರೆಗೆ ಸದಾ ಬಾಪ್‌ದಾದಾರವರ ಫೈತ್‌ಫುಲ್ (ಸ್ವಾಮಿನಿಷ್ಠೆ,ನಂಬಿಕೆಯುಳ್ಳ), ಸದಾ ತಂದೆಯ ಹೆಜ್ಜೆಗಳ ಮೇಲೆ ಹೆಜ್ಜೆಯನ್ನಿಡುವಂತಹ, ಸದಾಕಾಲದ ಸಹಯೋಗಿ ಮತ್ತು ಜೊತೆಗಾರನಾಗಿದ್ದಾರೆ. ಪ್ರತೀ ಸಮಯದಲ್ಲಿಯೂ ತಂದೆ ಮತ್ತು ಸೇವೆಯಲ್ಲಿ ಮಗ್ನರಾಗಿರುವಂತಹ, ಸದಾ ಸಂಕಲ್ಪದಲ್ಲಿಯೂ ಸಹ ಶ್ರೇಷ್ಠ ಮರ್ಯಾದೆಗಳ ಗೆರೆಯಿಂದ ಹೊರಹೋಗದಿರುವ ಮರ್ಯಾದಾ ಪುರುಷೋತ್ತಮ- ಸದಾ ಇಂತಹ ಮಕ್ಕಳು ಪ್ರತೀ ಸೆಕೆಂಡ್, ಪ್ರತೀ ಸಂಕಲ್ಪದಲ್ಲಿಯೂ ಜನ್ಮ-ಜನ್ಮದ ಜೊತೆಗಾರನಾಗಿರುತ್ತಾರೆ. ಯಾರು ಈಗ ಬಾಬಾರವರೊಂದಿಗೆ ಮಾಡಿರುವ ಪ್ರತಿಜ್ಞೆಯನ್ನು ನಿಭಾಯಿಸುತ್ತಾರೆ- ನಿಮ್ಮೊಂದಿಗೇ ಕುಳಿತುಕೊಳ್ಳುವೆನು, ಪ್ರತೀ ಸೆಕೆಂಡ್ ಪ್ರತೀ ಕರ್ಮದಲ್ಲಿಯೂ ನಿಮ್ಮೊಂದಿಗಿನ ಜೊತೆಯನ್ನು ನಿಭಾಯಿಸುತ್ತೇನೆ ಎನ್ನುವಂತಹ ಪ್ರತಿಜ್ಞೆಯನ್ನು ನಿಭಾಯಿಸುವ ಸುಪುತ್ರ ಮಕ್ಕಳಿಗೆ ಬಾಬಾರವರೂ ಸಹ ಜನ್ಮ-ಜನ್ಮಾಂತರದ ಜೊತೆಗಾರಭವ ಎನ್ನುವ ವರದಾನವನ್ನೂ ಈಗ ಕೊಡುತ್ತಾರೆ. ಸಾಕಾರ ತಂದೆಯ ಜೊತೆಯಲ್ಲಿ ಭಿನ್ನ ನಾಮ ರೂಪದಿಂದ ಪೂಜ್ಯರಲ್ಲಿಯೂ ಜೊತೆಗಾರ ಮತ್ತು ಪೂಜಾರಿಯಲ್ಲಿಯೂ ಜೊತೆಗಾರ. ಜ್ಞಾನಿ ಆತ್ಮನಾಗುವುದರಲ್ಲಿಯೂ ಜೊತೆಗಾರ ಮತ್ತು ಭಕ್ತಾತ್ಮನಾಗುವುದರಲ್ಲಿಯೂ ಜೊತೆಗಾರ, ಸದಾ ಇಂತಹ ಜೊತೆಗಾರನ ಅಥವಾ ತತತ್ವಂನ ವರದಾನವು ಇಂತಹ ವಿಶೇಷ ಆತ್ಮರಿಗೆ ವರ್ತಮಾನದಲ್ಲಿಯೂ ಪ್ರಾಪ್ತಿಯಾಗುತ್ತದೆ.

ಪ್ರತಿಯೊಂದು ಮಹಾರಥಿಯು ಸ್ವಯಂನ್ನು ಪರಿಶೀಲನೆ ಮಾಡಿಕೊಳ್ಳಬೇಕು- ವರ್ತಮಾನ ಸಮಯದಲ್ಲಿ ಗುಣಗಳ, ಜ್ಞಾನ ಮತ್ತು ಸೇವೆಯಲ್ಲಿ ಎಷ್ಟು ಬಾಪ್‌ದಾದಾರವರ ಸಮಾನ ಮತ್ತು ಎಲ್ಲಿಯವರೆಗೆ ಜೊತೆಗಾರರಾಗಿದ್ದೇವೆ. ಸಮಾನತೆಯೇ ಸಮೀಪತೆಯನ್ನು ತರುತ್ತದೆ. ಈಗಿನ ಸ್ಥಿತಿ ಮತ್ತು ಭವಿಷ್ಯದ ಸ್ಥಿತಿಯಲ್ಲಿ ಹಾಗೂ ಪ್ರತೀ ಸೆಕೆಂಡಿನ ಜೊತೆಗಾರನ ಅನುಭವವು ಜನ್ಮ-ಜನ್ಮಾಂತರದಲ್ಲಿಯೂ ನಾಮ- ರೂಪ, ಸಂಬಂಧದ ಜೊತೆಯ ಅನುಭವಕ್ಕೆ ನಿಮಿತ್ತವಾಗುತ್ತದೆ. ವಿಕರ್ಮಾಜೀತನಾಗುವುದರಲ್ಲಿಯೂ ಸಹ ಜೊತೆಗಾರ ಮತ್ತು ರಾಜಾ ವಿಕ್ರಮ(ವಿಕ್ರಮಾದಿತ್ಯ)ನಾಗುವುದರ ಸಮಯದಲ್ಲಿಯೂ ಜೊತೆಗಾರ. ಪ್ರತಿಯೊಂದು ಪಾತ್ರದಲ್ಲಿ, ಪ್ರತಿಯೊಂದು ವರ್ಣದಲ್ಲಿ ಜೊತೆ ಜೊತೆಯಲ್ಲಿರುತ್ತೀರಿ. ಇದರ ಗಾಯನವೇ ಇದೆ ಜೊತೆಯಲ್ಲಿ ಬದುಕುತ್ತೇವೆ, ಜೊತೆಯಲ್ಲಿ ಸಾಯುತ್ತೇವೆ ಅರ್ಥಾತ್ ಜೊತೆಯಲ್ಲಿ ಏರುತ್ತೇವೆ, ಜೊತೆಯಲ್ಲಿ ಬೀಳುತ್ತೇವೆ. ಏರುವಕಲೆ, ಇಳಿಯುವಕಲೆ ಹಗಲು ಮತ್ತು ರಾತ್ರಿ, ಎರಡರಲ್ಲಿಯೂ ನಿರಂತರ ಯೋಗಿ, ನಿರಂತರ ಜೊತೆಗಾರ, ಈಗ ಸಂಗಮದಲ್ಲಿ ಜೊತೆಯನ್ನು ನಿಭಾಯಿಸುವುದರಲ್ಲಿ ಎಷ್ಟು ಸಂಪೂರ್ಣವಾಗಿದ್ದೀರಿ, ಅಷ್ಟೇ ಸಂಬಂಧದಲ್ಲಿಯೂ ಸಮೀಪವಾಗುತ್ತೀರಿ. ಡ್ರಾಮಾದಲ್ಲಿ ವಿಶ್ವದ ನಂಬರ್ ವನ್ ಶ್ರೇಷ್ಠ ಆತ್ಮನ ಮಹತ್ವವಿದೆ. ಇಂತಹ ನಂಬರ್‌ವನ್ ಆತ್ಮನ ಸಂಬಂಧದಲ್ಲಿರುವಂತಹ ಆತ್ಮರೂ ಸಹ ಸದಾ ಮಹತ್ವವಿರುವವರಾಗಿ ಬಿಡುತ್ತಾರೆ. ಹೇಗೆ ವರ್ತಮಾನದಲ್ಲಿಯೂ ಸಹ ಅಲ್ಪಕಾಲದ ಸ್ಟೇಟಸ್‌ನ್ನು ಪಡೆದುಕೊಳ್ಳುವ ಆತ್ಮರಲ್ಲಿ ಕೆಲವರು ಪ್ರೆಸಿಡೆಂಟ್ ಅಥವಾ ಪ್ರೈಮ್ ಮಿನಿಸ್ಟರ್ ಆದಾಗ ಅವರ ಜೊತೆಯಲ್ಲಿ ಅವರ ಪರಿವಾರವೂ ಸಹ ಮಹತ್ವವುಳ್ಳದ್ದಾಗಿ ಬಿಡುತ್ತದೆ, ಅಂದಾಗ ಸದಾಕಾಲದ ಶ್ರೇಷ್ಠಾತ್ಮನ ಸಂಬಂಧದಲ್ಲಿ ಬರುವಂತಹ ಆತ್ಮರ ಮಹತ್ವವು ಇನ್ನೆಷ್ಟು ಶ್ರೇಷ್ಠವಾಗಿರುತ್ತದೆ!! ಈಗ ಸ್ವಲ್ಪ ಏರುಪೇರಾದಾಗಲೂ ಆದಿ ಹಳೆಯ ಆತ್ಮರು, ಸದಾ ಜೊತೆಯ ಸಂಬಂಧವನ್ನು ನಿಭಾಯಿಸುತ್ತಾ ಬಂದಿದ್ದಾರೆಯೋ ಅವರ ಮಹತ್ತಿಕೆಯು ಎಷ್ಟಾಗುತ್ತದೆ! ಹೇಗೆ ಹಳೆಯ ವಸ್ತುವಿನ ಮಹತ್ವಿಕೆಯನ್ನಿಡುತ್ತಾರೆ, ಅಮೂಲ್ಯವೆಂದು ತಿಳಿಯುತ್ತಾರೆಯೋ ಹಾಗೆಯೇ ತಾವು ಆತ್ಮರ ಮೌಲ್ಯವನ್ನು ವರ್ಣನೆ ಮಾಡುತ್ತಾ-ಮಾಡುತ್ತಾ, ಗುಣಗಾನ ಮಾಡುತ್ತಾ- ಮಾಡುತ್ತಾ ಸ್ವಯಂನ್ನೂ ಧನ್ಯನೆಂದು ಅನುಭವ ಮಾಡುತ್ತಾರೆ. ತಮ್ಮನ್ನು ಇಂತಹ ಶ್ರೇಷ್ಠ ಆತ್ಮನೆಂದು ತಿಳಿದುಕೊಳ್ಳುತ್ತೀರಾ? ತಾವು ತಂದೆಯ ಗುಣವನ್ನೆಷ್ಟು ಗಾಯನ ಮಾಡುತ್ತೀರಿ, ರಿಟರ್ನ್‌ನಲ್ಲಿ ಇಂತಹ ಆತ್ಮರು ಅಷ್ಟೇ ಗುಣಗಾನ ಮಾಡುವರು. ಈಗ ಗುಣಗಾನ ಮಾಡುತ್ತಿಲ್ಲ ಏಕೆ? ಈಗ ಸೇವೆಯನ್ನು ಮಾಡುತ್ತೀರಿ ಆದರೆ ಸಂಪೂರ್ಣ ಫಲವಂತು ಅಂತ್ಯದಲ್ಲಿಯೇ ಸಿಗುತ್ತದೆ – ಏಕೆ? ಈಗಲೂ ಸಿಗುತ್ತದೆ ಆದರೆ ಕಡಿಮೆ ಸಿಗುತ್ತದೆ. ಅದಕ್ಕೆ ಕಾರಣವನ್ನು ತಿಳಿದಿದ್ದೀರಾ? ಈಗ ಕೆಲಕೆಲವೊಮ್ಮೆ ಕೆಲವೊಂದೆಡೆ ತಂದೆ ಹಾಗೂ ತಮ್ಮನ್ನು ಸೇರ್ಪಡೆ ಮಾಡಿಬಿಡುತ್ತೀರಿ. ತಂದೆಯ ಗುಣಗಾನ ಮಾಡುತ್ತಾ ಮಾಡುತ್ತಾ ತಮ್ಮನ್ನು ತಾವೂ ಗುಣಗಾನ ಮಾಡಿಕೊಳ್ಳುತ್ತೀರಿ. ಭಾಷೆಯನ್ನು ಬಹಳ ಮಧುರವಾಗಿ ಮಾತನಾಡುತ್ತೀರಿ ಆದರೆ ನಾನು – ಎನ್ನುವ ಭಾವವಿರುವ ಕಾರಣದಿಂದ ಆತ್ಮರ ಭಾವನೆಯು ಸಮಾಪ್ತಿಯಾಗಿ ಬಿಡುತ್ತದೆ. ಎಲ್ಲದಕ್ಕಿಂತ ಅತಿದೊಡ್ಡ ಅತಿಸೂಕ್ಷ್ಮ ತ್ಯಾಗವು ಇದೇ ಆಗಿದೆ. ಇದೇ ತ್ಯಾಗದ ಆಧಾರದ ಮೇಲೆ ನಂಬರ್‌ವನ್ ಆತ್ಮನ ನಂಬರ್‌ವನ್ ಭಾಗ್ಯವನ್ನು ಮಾಡಲಾಯಿತು ಮತ್ತು ಅಷ್ಟರತ್ನಗಳ ನಂಬರ್‌ನ ಆಧಾರವೂ ಇದೇ ತ್ಯಾಗವಾಗಿದೆ. ಪ್ರತೀ ಸೆಕೆಂಡ್, ಪ್ರತೀ ಸಂಕಲ್ಪದಲ್ಲಿಯೂ ಬಾಬಾ-ಬಾಬಾ ಎನ್ನುವುದು ನೆನಪಿರಲಿ ನಾನು ಎನ್ನುವ ಭಾವವು ಸಮಾಪ್ತಿಯಾಗಿಬಿಡಲಿ - ಯಾವಾಗ ನಾನು ಇಲ್ಲವೆಂದರೆ ನನ್ನದೂ ಇಲ್ಲ. ನನ್ನ ಸ್ವಭಾವ, ನನ್ನ ಸಂಸ್ಕಾರವಾಗಿದೆ. ನನ್ನ ಗುಣವಾಗಿದೆ. ನನ್ನ ಕೆಲಸ ಅಥವಾ ಡ್ಯೂಟಿ, ನನ್ನ ಹೆಸರು, ನನ್ನ ಸ್ಥಾನ, ನನ್ನತನದಲ್ಲಿ ಈ ನನ್ನದು-ನನ್ನದೂ ಸಹ ಸಮಾಪ್ತಿಯಾಗಿಬಿಡುತ್ತದೆ. ನಾನು ಮತ್ತು ನನ್ನತನವು ಸಮಾಪ್ತಿಯಾಯಿತು - ಇದೇ ಸಮಾನತೆ ಮತ್ತು ಸಂಪೂರ್ಣತೆಯಾಗಿದೆ. ಸ್ವಪ್ನದಲ್ಲಿಯೂ ಸಹ ನಾನು ಎನ್ನುವುದಿರಬಾರದು. ಇದಕ್ಕೆ ಅಶ್ವಮೇಧ ಯಜ್ಞದಲ್ಲಿ ನಾನು ಎನ್ನುವ ಅಶ್ವವನ್ನು ಸ್ವಾಹಾ ಮಾಡುವುದು ಎಂದು ಹೇಳಲಾಗುತ್ತದೆ. ಇದೇ ಅಂತಿಮ ಆಹುತಿಯೂ ಆಗಿದೆ ಮತ್ತು ಇದರದ ಆಧಾರದ ಮೇಲೆಯೇ ಅಂತಿಮ ವಿಜಯದ ಕಹಳೆಯು ಮೊಳಗುತ್ತದೆ. ಸಂಘಟನೆಯ ರೂಪದಲ್ಲಿ ಹೃದಯದಿಂದ ಈ ಆಹುತಿಯ ಧ್ವನಿಯನ್ನು ಹರಡಿಸಿರಿ. ನಂತರ ಸದಾ ಈ ಪಂಚತತ್ವಗಳು ಎಲ್ಲಾ ಪ್ರಕಾರದ ಸಫಲತೆಗಳ ಮಾಲೆಯನ್ನು ಹಾಕುತ್ತದೆ. ಸೇವೆಯಲ್ಲಿ ಈಗಿನವರೆಗಂತೂ ಸಹ ವಿಘ್ನರೂಪವಾಗುತ್ತದೆ ಆದರೆ ಸ್ವಾಹಾದ ಆಹುತಿಯನ್ನು ಕೊಡುವುದರಿಂದ ಆರತಿಯನ್ನು ಬೆಳಗುತ್ತಾರೆ. ಖುಷಿಯ ವಾದ್ಯಗಳನ್ನು ಮೊಳಗಿಸುತ್ತಾರೆ. ಎಲ್ಲಾ ಆತ್ಮರು

ತನ್ನ ಬಹಳಕಾಲದ ಇಚ್ಛೆಗಳ ಪ್ರಾಪ್ತಿಯನ್ನು ಮಾಡಿಕೊಳ್ಳುತ್ತಾ, ಮಹಿಮೆಯ ಕಾಲ್ಗೆಜ್ಜೆಯನ್ನು ಧರಿಸಿ ನರ್ತಿಸುತ್ತಾರೆ. ಅಗಲೇ ಅಂತಿಮ ಭಕ್ತಿಯ ಸಂಸ್ಕಾರವು ಪೂರ್ಣ ಆಗುತ್ತದೆ. ಇಂತಹ 'ಭಕ್ತಾತ್ಮರಿಗೆ ಭಕ್ತತನದ ವರದಾನವೂ ಸಹ ಈಗಲೇ ತಾವು ಇಷ್ಟದೇವ ಆತ್ಮನ ಮೂಲಕ ಸಿಗುತ್ತದೆ. ಕೆಲವರಿಗೆ ಭಕ್ತಾತ್ಮನ ವರದಾನ, ಕೆಲವರಿಗೆ ಆತ್ಮಜ್ಞಾನಿಯಾಗುವ ವರದಾನ. ಈಗ ವರದಾನಿ ಆಗಿ ಸರ್ವಾತ್ಮರಿಗೆ ವರದಾನವನ್ನು ಕೊಡುತ್ತೀರಿ. ಸಾಕಾರಿ ರಾಜ್ಯಾಡಳಿತ ಮಾಡುವವರಿಗೆ ರಾಜ್ಯ ಪದವಿಯ ವರದಾನವನ್ನು ಕೊಡುತ್ತೀರಿ. ಇಂತಹ ವರದಾನ ಮೂರ್ತಿ ಕಾಮಧೇನು ಆತ್ಮರಾಗಿದ್ದೀರಾ? ಯಾವ ಆತ್ಮರು ಏನನ್ನು ಬೇಡುತ್ತಾರೆಯೋ ತಥಾಸ್ತು. ಇಂತಹ ಆತ್ಮರಿಗೆ ಸದಾ ಸಮೀಪ ಜೊತೆಗಾರ ಎಂದು ಹೇಳಲಾಗುತ್ತದೆ. ಒಳ್ಳೆಯದು-

ಈ ರೀತಿ ಸದಾ ಶೂರವೀರ, ಸದಾ ಸಿಂಹಾಸನ ಮತ್ತು ಕಿರೀಟಧಾರಿ, ಪ್ರತೀ ಸೆಕೆಂಡ್ ಪ್ರತೀ ಸಂಕಲ್ಪದಲ್ಲಿ ಶ್ರೇಷ್ಠತ್ಯಾಗದಿಂದ ಶ್ರೇಷ್ಠಭಾಗ್ಯವನ್ನು ರೂಪಿಸುವಂತಹ, ಪ್ರತೀ ಹೆಜ್ಜೆಯಲ್ಲಿ ಫಾಲೋ ಮಾಡುವಂತಹ, ಪ್ರತೀ ಸಮಯದಲ್ಲಿ ಸರ್ವ ಖಜಾನೆಗಳಿಂದ ಸಂಪನ್ನ ಅವಿನಾಶಿ ಖಜಾನೆಯಿಂದ ಸದಾ ಸಂಪೂರ್ಣರಾಗಿರುವ, ಲಕ್ಷ್ಯ ಮತ್ತು ಲಕ್ಷಣವು ಸದಾ ಸಂಪೂರ್ಣವಾಗಿಡುವ, ಇಂತಹ ಸಂಪೂರ್ಣ ಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.

**ದಾದಿ-ದೀದಿಯವರೊಂದಿಗೆ ವಾರ್ತಾಲಾಪ:-** ಭವಿಷ್ಯದ ಯೋಜನೆಯನ್ನು ಮಾಡಬೇಕಾಗಿದೆ. ಅದಕ್ಕಾಗಿ ಸಂಘಟನೆ ಯನ್ನು ಸೇರಿಸಿದ್ದೀರಾ? ಯಾವ ಯೋಜನೆಯನ್ನು ಮಾಡುವಿರಿ ಏನೆಲ್ಲವನ್ನೂ ಮಾಡಿರುವಿರಿ, ಅದಂತು ಬಹಳ ಚೆನ್ನಾಗಿ ಮಾಡಿದ್ದೀರಿ. ಮತ್ತು ಈಗ ಏನನ್ನು ಮಾಡುತ್ತೀರಿ, ಅದೂ ಸಹ ಚೆನ್ನಾಗಿದೆ. ಯಾವುದೇ ಕಾರ್ಯಕ್ರಮ ಅಥವಾ ಯೋಜನೆಯ ಸಫಲತೆಗೆ ಆಧಾರವೇನಾಗಿರುತ್ತದೆ? ಪದ್ಧತಿಯ ರೀತಿಯಲ್ಲಿಯೂ ಸಹ ಯಾವುದೇ ಕಾರ್ಯದ ಸಫಲತೆಗೆ ಆಧಾರವೇನಾಗಿರುತ್ತದೆ? ಯಾವುದೇ ಕಾರ್ಯಕ್ರಮವನ್ನು ಸಫಲ ಮಾಡಬೇಕೆಂದರೆ ಏನನ್ನು ಯೋಚಿಸುವಿರಿ? ಈಗ ಯಾವ ಸಮ್ಮೇಳನವನ್ನು ಮಾಡಿದಿರಿ, ಅದರ ಸಫಲತೆಗೆ ವಿಶೇಷ ಆಧಾರವು ವಿಶೇಷ ವ್ಯಕ್ತಿಯ ವ್ಯಕ್ತಿತ್ವವಾಗಿರುತ್ತದೆ. ಎಂತಹ ವ್ಯಕ್ತಿತ್ವವಿರುವವರು ಬರುತ್ತಾರೆಯೋ ಅಂತಹ ರೀತಿಯಲ್ಲಿಯೇ ಶಬ್ದವು ಹರಡುತ್ತದೆ. ತಾವು ಯಾವಾಗ ಕಾರ್ಯಕ್ರಮವನ್ನು ತಯಾರಿ ಮಾಡಿಕೊಳ್ಳುತ್ತೀರೆಂದರೆ ವಿಶೇಷವಾಗಿ ಧ್ವನಿಯು ಮೊಳಗಬೇಕೆನ್ನುವ ಲಕ್ಷ್ಯವನ್ನಿಡುವ ಯೋಜನೆಯನ್ನು ಮಾಡುತ್ತೀರಿ. ವಿಶೇಷ ವ್ಯಕ್ತಿತ್ವ(ಘನತೆ)ದವರು ಬರಲಿ, ಅದರಿಂದ ಧ್ವನಿಯು ಮೊಳಗುತ್ತದೆ. ಅಂದಮೇಲೆ ವ್ಯಕ್ತಿತ್ವವು ಸಾಧನವಾಗಿ ಬಿಡುತ್ತದೆ. ಲೌಕಿಕ ಘನತೆಯಿರುವವರು ಹೊರಗಿನ ಧ್ವನಿಯನ್ನು ಹರಡಿಸಲು ನಿಮಿತ್ತರಾಗುತ್ತಾರೆ, ಹಾಗೆಯೇ ತಾವು ವರ್ತಮಾನ ಸಮಯದಲ್ಲಿ ವಿಶೇಷವಾಗಿ ನಿಮಿತ್ತವಾಗಿರುವ ಸೇವಾದಾರಿಗಳ ಸೇವೆಯಲ್ಲಿ ಘನತೆಯಿರಬೇಕು. ಘನತೆಯು ಮನುಷ್ಯನನ್ನು ತನ್ನ ಕಡೆಗೆ ಆಕರ್ಷಣೆ ಮಾಡುತ್ತದೆ. ಅಂದಮೇಲೆ ವರ್ತಮಾನ ಸಮಯದ ಘನತೆಯು (ಪರ್ಸನಾಲಿಟಿ) ಯಾವುದಾಗಿರಬೇಕು? ಪವಿತ್ರತೆಯೇ ಘನತೆಯಾಗಿದೆ. ಎಷ್ಟೆಷ್ಟು ಪವಿತ್ರತೆಯಿರುತ್ತದೆಯೋ ಪವಿತ್ರತೆಯ ಘನತೆಯು ಸ್ವತಹವಾಗಿಯೇ ಸರ್ವರ ಶಿರಸ್ಸನ್ನು ಬಾಗಿಸುತ್ತದೆ. ಹೇಗೆ ಡ್ರಾಮಾದಲ್ಲಿ ಸನ್ಯಾಸಿಗಳ ಮುಂದೆಯೂ ಸಹ ತಲೆಯನ್ನು ಬಾಗಿಸುವರು, ಅದು ಪವಿತ್ರತೆಯ ಘನತೆಯ ಕಾರಣದಿಂದ ಬಾಗಿಸುವರು. ಪವಿತ್ರತೆಯ ಘನತೆಯು ದೊಡ್ಡ- ದೊಡ್ಡ ಗಣ್ಯರ ತಲೆಯನ್ನೂ ಬಾಗಿಸುತ್ತದೆ. ಅಂದಮೇಲೆ ವರ್ತಮಾನ ಸಮಯದಲ್ಲಿ ಪವಿತ್ರತೆಯ ವ್ಯಕ್ತಿತ್ವದ ಆಧಾರದ ಮೇಲೆ ತಲೆಬಾಗುವರು. ಹೇಗೆ ಅಗರಬತ್ತಿಯ ಸುಗಂಧವು ಸೆಳೆಯುತ್ತದೆಯಲ್ಲವೆ, ಹಾಗೆಯೇ ಬಂದಕೂಡಲೇ ಪವಿತ್ರತೆಯ ಸುಗಂಧದ ಅನುಭವವಾಗಲಿ. ಎಲ್ಲಿ ಯಾವುದು ನೋಡಿದರಲ್ಲಿ ಪವಿತ್ರತೆಯೇ ಪವಿತ್ರತೆಯು ಕಂಡುಬರಲಿ, ನಾಲ್ಕೂ ಕಡೆಯಲ್ಲಿ ಕಂಡಬರುವುದಿಲ್ಲ, ವರ್ತಮಾನ ಸಮಯದಲ್ಲಿ ಇದನ್ನೇ ಅನುಭವ ಮಾಡಲು ಬಯಸುತ್ತಾರೆ. ಭಲೆ ಎಷ್ಟೇ ಮಹಾನ್ ಆತ್ಮನಾಗಿರಬಹುದು, ಹೆಸರಿದೆ ಆದರೆ ಪವಿತ್ರತೆಯ ಪ್ರಕಂಪನಗಳಿಲ್ಲ ಏಕೆಂದರೆ, ಅವರು ಸಿದ್ಧಿಯ ಹೆಸರು, ಮಾನ್ಯತೆ, ಗೌರವವನ್ನು ಸ್ವೀಕಾರ ಮಾಡಿಬಿಡುತ್ತಾರೆ. ಆದ್ದರಿಂದ ಪವಿತ್ರತೆಯ ಪ್ರಕಂಪನಗಳು ಎಲ್ಲಿಯೂ ಬರುವುದಿಲ್ಲ. ಅಲ್ಪಕಾಲದ ಪ್ರಾಪ್ತಿಯ ಆಕರ್ಷಣೆಯಿರುತ್ತದೆ ಆದರೆ ಪವಿತ್ರತೆಯ ಆಕರ್ಷಣೆಯಾಗುವುದಿಲ್ಲ. ಈಗ ಪ್ರತ್ಯಕ್ಷ ಜೀವನದಲ್ಲಿ ಈ ಪವಿತ್ರತೆಯ ಘನತೆಯಿರಬೇಕು, ಆ ಘನತೆಯು ತಾನಾಗಿಯೇ ಆಕರ್ಷಣೆ ಮಾಡಲಿ, ಎಲ್ಲಿಯಾದರೂ

ಪ್ರಧಾನಮಂತ್ರಿಯು ಬರುತ್ತಾರೆ, ಘನತೆಯಿದೆ ಆದ್ದರಿಂದ ಎಲ್ಲರೂ ಸ್ವತಹವಾಗಿಯೇ ಓಡಿಬರುತ್ತಾರಲ್ಲವೆ. ಅಂದಮೇಲೆ ಈ ಘನತೆಯು ಎಲ್ಲದಕ್ಕಿಂತ ನಂಬರ್‌ವನ್ ಆಗಿದೆ. ಈಗ ಯೋಜನೆಯನ್ನು ಮಾಡಬೇಕಾಗಿದೆ. ಧರ್ಮಾತ್ಮರನ್ನು ಆಕರ್ಷಿಸುವ ಘನತೆಯೂ ಇದೇ ಆಗಿದೆ. ಅವರು ಅನುಭವ ಮಾಡಲಿ - - ನಮ್ಮ ಬಳಿ ಯಾವ ವಸ್ತುವಿಲ್ಲವೋ ಅದು ಇಲ್ಲಿದೆ. ಇಲ್ಲವೆಂದರೆ ತಿಳಿಯುತ್ತಾರೆ- ಕನ್ಯೆಯರು, ಮಾತೆಯರಿದ್ದಾರೆ, ಒಳ್ಳೆಯ ಕಾರ್ಯವನ್ನು ಮಾಡುತ್ತಿದ್ದಾರೆ, ಇದೇ ಭಾವನೆಯಿಂದ ನೋಡುತ್ತಾರೆ ಆದರೆ ಘನತೆಯನ್ನು ತಿಳಿದುಕೊಂಡು ಮುಂದೆ ಬರಲಿ- ಇವರದು ವಿಶ್ವದ ಅತಿದೊಡ್ಡ ಘನತೆಯಾಗಿದೆ. ತಿಳಿದುಕೊಂಡಿದ್ದು ಬೇರೆ, ನೋಡಿದ್ದೇ ಬೇರೆ - ಇಂತಹ ಅನುಭವ ಮಾಡಲಿ, ಯಾವಮಾತು ನಮ್ಮ ಬುದ್ಧಿಯಲ್ಲಿಲ್ಲವೋ ಅದು ಇವರ ಪ್ರತ್ಯಕ್ಷ ಜೀವನದಲ್ಲಿದೆ. ಇದಾಗಿದೆ - ಮಹಾರಥಿಯನ್ನು ಕೆಳಗೆ ಬೀಳಿಸುವುದು. ಹೇಗೆ ಇರುವೆಯು ಆನೆಯನ್ನೂ ಬೀಳಿಸಿ ಬಿಡುತ್ತದೆ ಅಲ್ಲವೆ. ಅಂದಮೇಲೆ ಈ ಘನತೆಯಲ್ಲಿ ಬಾಗಿಬಿಡಬೇಕು. ಈಗ ಸ್ವಯಂನ ಸ್ವರೂಪವು ಸರ್ವಪ್ರಾಪ್ತಿಗಳ ಆಯಸ್ಕಾಂತದ ಸ್ವರೂಪವಾಗಲಿ, ಅದು ಎಲ್ಲರನ್ನೂ ತಾನಾಗಿಯೇ ಆಕರ್ಷಿಸುವಂತಿರಲಿ. ಎಲ್ಲಿ ನೋಡಿದರೂ, ಯಾರನ್ನೇ ನೋಡಿದರೂ ಪ್ರಾಪ್ತಿಯ ಅನುಭವವಾಗಲಿ, ಅಂದ ಮೇಲೆ ಪ್ರಾಪ್ತಿಯೇ ಚುಂಬಕವಾಗಿದೆ ಮತ್ತು ಸರ್ವಪ್ರಾಪ್ತಿ ಸ್ವರೂಪವೇ ಚುಂಬಕವಾಗಿದೆ. ಈಗ ಪರಿಶ್ರಮ, ಶಕ್ತಿ ಮತ್ತು ಧನವನ್ನೂ ತೊಡಗಿಸಬೇಕಾಗುತ್ತದೆ, ನಂತರದಲ್ಲಿ ಇವೆರಡರ ಕಾರ್ಯವು ಈ ಪವಿತ್ರತೆಯ ಘನತೆಯೇ ಮಾಡುತ್ತದೆ. ಈಗ ಪ್ರಕಂಪನಗಳು ಬದಲಾಗಿಲ್ಲ. ಈಗಲೂ ಸಹ ಭಿನ್ನ ದೃಷ್ಟಿಯಿಂದ ನೋಡುತ್ತಾರೆ. ಈಗ ತಮ್ಮ ಪ್ರಕಂಪನದ ಮೂಲಕ ಯಾರಾಗಿದ್ದೀರಿ, ಹೇಗಿದ್ದೀರಿ, ಅದೇ ದೃಷ್ಟಿಯಿಂದ ನೋಡುವ ಪ್ರಕಂಪನವನ್ನು ಹರಡಿಸಿರಿ ಮತ್ತು ತಮ್ಮ ವರದಾನಿ, ಮಹಾದಾನಿ ವೃತ್ತಿಯಿಂದ ವೈಬ್ರೇಷನ್ ಮತ್ತು ವಾಯುಮಂಡಲವನ್ನು ಪರಿವರ್ತನೆ ಮಾಡಿರಿ. ಈಗಿನವರೆಗೂ ಸಹ ಮನುಷ್ಯರು ಎಲ್ಲಿಗೆ ಹೋಗುವುದು ಎಂದು ಚಡಪಡಿಸುತ್ತಾ ಹುಡುಕುತ್ತಿರುತ್ತಾರೆ. ಬಾಯಾರಿರುವ ಆತ್ಮರಿಗೀಗ ಸಾಗರ ಅಥವ ನದಿಗಳ ಸತ್ಯಸ್ಥಾನದ ಪರಿಚಯವು ಸಿಕ್ಕಿಲ್ಲ ಆದ್ದರಿಂದ ಬಹಳ ಹುಡುಕುತ್ತಾರೆ. ಅಂದಮೇಲೆ ತಮ್ಮ ಲೈಟ್‌ಹೌಸ್ ಸ್ವರೂಪದಿಂದ ಗುರಿಯ ಮಾರ್ಗವನ್ನು ತೋರಿಸಿರಿ. ಒಳ್ಳೆಯದು-

**ಜಾನಕಿ ದಾದಿಯವರೊಂದಿಗೆ:-** ಲಂಡನ್ನಿನಲ್ಲಿಯೂ ಸಹ ಧರ್ಮಾತ್ಮರ ಅವಕಾಶವಿದೆ. ಯಾವುದೇ ಅವಕಾಶವನ್ನು ತೆಗೆದುಕೊಳ್ಳಿರಿ, ಅದರಲ್ಲಿ ಆತ್ಮೀಯತೆಯ ಆಕರ್ಷಣೆಯ ದೃಶ್ಯವು ಖಂಡಿತವಾಗಿಯೂ ಇರಲಿ. ಹೇಗೆ ತೀರ್ಥಸ್ಥಾನದಲ್ಲಿ ಶಾಂತಿಕುಂಡ ಅಥವಾ ಗತಿ-ಸದ್ಗತಿಯ ಕುಂಡವನ್ನು ಮಾಡುತ್ತಾರಲ್ಲವೆ. ಅವರು ಈ ರೀತಿ ತಿಳಿದುಕೊಳ್ಳಲಿ- ಸರ್ವಪ್ರಾಪ್ತಿಯ ಕುಂಡವು ಇದೇ ಆಗಿದೆ. ಭಿನ್ನತನದ ಅನುಭವವಾಗಲಿ, ಸಾಧಾರಣತೆಯಿರಲಿ ಆದರೆ ಶಕ್ತಿಶಾಲಿಯಿರಲಿ ಮತ್ತು ಈ ಸತ್ಯತೆಯ ಅನುಭವವಾಗಲಿ, ಇಂತಹ ಸ್ಥಿತಿಯನ್ನು ತಂದುಕೊಳ್ಳುತ್ತಾ ತಂದುಕೊಳ್ಳುತ್ತಾ ವಿಶ್ವದ ರಾಜ್ಯವನ್ನೂ ತೆಗೆದುಕೊಂಡುಬಿಡುತ್ತೀರಿ. ಈಗಂತು ಕೇವಲ ಕಾರ್ಯಕ್ರಮದ ನಿಮಂತ್ರಣವನ್ನು ಕೊಡುತ್ತೀರಿ, ನಂತರ ಹೇಗೆ ಜಡಚಿತ್ರಗಳನ್ನು ಕಣ್ಣುಗಳು ಮತ್ತು ತಲೆಯ ಮೇಲೆ ಇಟ್ಟುಕೊಳ್ಳುತ್ತಾರೆಯೋ ಹಾಗೆಯೇ ತಮ್ಮೆಲ್ಲರನ್ನು ಆ ದನಿಯಿಂದ ಎಲ್ಲಿ ಕೂರಿಸುವುದು, ಏನು ಮಾಡುವುದು, ಏನೂ ತೋಚುತ್ತಿಲ್ಲವಲ್ಲ. ಮಹಿಮೆಯಲ್ಲಿ ಏನು ಹೇಳಲಿ, ಏನನ್ನು ಹೇಳಬಾರದು, ಇದು ತೋಚುತ್ತಿಲ್ಲವಲ್ಲ ಎನ್ನುವಂತಾಗುತ್ತದೆ. ಸಂಘಟನೆಯನ್ನು ಮಾಡುವುದು ಒಳ್ಳೆಯದು, ಸಂಘಟನೆಯಿಂದಲೂ ಸಹ ಉಮ್ಮಂಗ ಉಲ್ಲಾಸವು ಹೆಚ್ಚುತ್ತದೆ. ಒಳ್ಳೆಯದು-

ರಿವೈಜ್ ಕೋರ್ಸ್/ಅವ್ಯಕ್ತ ಮುರಳಿ 01-04-1978.

**ನಿರಂತರ ಯೋಗಿಗಳೇ ನಿರಂತರ ಜೊತೆಗಾರರಾಗಿದ್ದಾರೆ.**

ಆದಿಯಿಂದ ಅಂತ್ಯದವರೆಗೆ ಬಾಪ್‌ದಾದಾರವರ ನಂಬಿಕೆಯುಳ್ಳ, ಸದಾ ತಂದೆಯ ಹೆಜ್ಜೆಯಲ್ಲಿ ಹೆಜ್ಜೆಯನ್ನು ಇಡುತ್ತಾ, ಸಹಯೋಗಿ ಮತ್ತು ಸದಾ ಜೊತೆ ಇರುವ, ಪ್ರತಿ ಸಮಯ ಬಾಬಾ ಮತ್ತು ಸೇವೆಯಲ್ಲಿ ಮಗ್ನವಾಗಿರುವ ಸದಾ ಮರ್ಯಾದೆಯ ರೇಖೆಯಿಂದ

ಸಂಕಲ್ಪದಿಂದಲೂ ಹೊರಬರದ ಮರ್ಯಾದಾ ಪುರುಷೋತ್ತಮರೇ ಪ್ರತಿಕ್ಷಣ, ಪ್ರತಿ ಸಂಕಲ್ಪದಲ್ಲಿ ಜನ್ಮ ಜನ್ಮಗಳಿಗೆ ಜೊತೆ ಇರುತ್ತಾರೆ. ಅರ್ಥಾತ್ ಭಿನ್ನ ಭಿನ್ನ ನಾಮ ರೂಪಗಳಲ್ಲಿ ಪೂಜ್ಯ ಸ್ಥಿತಿಯಲ್ಲಿ ಮತ್ತು ಪೂಜಾರಿ ಸ್ಥಿತಿಯಲ್ಲಿ ಜ್ಞಾನಿ ಆತ್ಮರಾಗುವುದರಲ್ಲಿ ಮತ್ತು ಭಕ್ತಾತ್ಮರಾಗುವುದರಲ್ಲಿ ಜೊತೆ ಇರುತ್ತಾರೆ ಈಗಿನ ಪ್ರತಿಕ್ಷಣದ ಜೊತೆ ಜನ್ಮಜನ್ಮಾಂತರಗಳಿಗೆ ವಿವಿಧ ನಾಮ, ರೂಪ, ಸಂಬಂಧವನ್ನು ಅನುಭವ ಮಾಡಿಕೊಳ್ಳಲು ನಿಮಿತ್ತವಾಗುತ್ತದೆ ಎಂದು ಹೇಳುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಆದಿಯಿಂದ ಅಂತಿಮದವರೆಗೂ ಸದಾ ನಂಬಿಕೆಯುಳ್ಳ, ಸದಾ ತಂದೆಯ ಹೆಜ್ಜೆಯಲ್ಲಿ ಹೆಜ್ಜೆಯನ್ನಿಡುತ್ತಾ ಸದಾ ಸಹಯೋಗಿಯಾಗಿ ಇರುವ ಜೊತೆಗಾರನಾಗಿದ್ದೇನೆ.

2. ನಾನು ಶ್ರೇಷ್ಠ ಮರ್ಯಾದೆಯ ರೇಖೆಯಿಂದ ಸಂಕಲ್ಪದಿಂದಲೂ ಹೊರಗೆ ಹೋಗದ ಪ್ರತಿಕ್ಷಣ, ಪ್ರತಿ ಸಂಕಲ್ಪದಲ್ಲಿ, ಜನ್ಮಜನ್ಮಗಳಿಗೆ ತಂದೆಯನ್ನು ಜೊತೆಗಾರನನ್ನಾಗಿ ಮಾಡಿಕೊಂಡಿರುವ ಮರ್ಯಾದಾ ಪುರುಷೋತ್ತಮನು.

3. ನಾನು ಬ್ರಹ್ಮಾ ತಂದೆಗೆ ಪೂಜ್ಯ, ಪೂಜಾರಿ ಸ್ಥಿತಿಯಲ್ಲಿ, ಜ್ಞಾನಿ ಆತ್ಮನಾಗುವುದರಲ್ಲಿ, ಭಕ್ತಾತ್ಮರಾಗುವುದರಲ್ಲಿ, ಜೊತೆಯಲ್ಲಿ ಇರುತ್ತಾ ತತ್ವಂನ ವರದಾನವನ್ನು ಪಡೆದಿರುವ ವಿಶೇಷ ಆತ್ಮ.

4. ನಾನು ವರ್ತಮಾನ ಸಮಯದಲ್ಲಿ ಬಾಪ್‌ದಾದಾರವರ ಗುಣಗಳು, ಜ್ಞಾನ ಮತ್ತು ಸೇವೆಯಲ್ಲಿ ಸಮಾನವಾಗಿ ಇರುತ್ತಾ ಸಮೀಪಕ್ಕೆ ಬಂದಿದ್ದೇನೆ.

5. ನಾನು ಪ್ರತಿಕ್ಷಣ, ಪ್ರತಿ ಸಂಕಲ್ಪದಲ್ಲಿ ಬಾಬಾ-ಬಾಬಾ ಎಂಬ ಸ್ಮೃತಿಯಿಂದ ನನ್ನ ಎಂಬ ಭಾವನೆಯನ್ನು ತ್ಯಾಗ ಮಾಡಿ ನಂಬರ್ ಒನ್ ಆತ್ಮನಾಗಿ ನಂಬರ್ ಒನ್ ಭಾಗ್ಯವನ್ನು ತಯಾರು ಮಾಡಿಕೊಂಡಿರುವ ಅಷ್ಟರತ್ನ.

6. ನಾನು ಅಶ್ವಮೇಧ ಯಜ್ಞದಲ್ಲಿ "ನಾನು, ನನ್ನದು" ಎಂಬ ಭಾವನೆ (ಅಶ್ವವನ್ನು) ಅಂತಿಮ ಆಹುತಿ ಮಾಡಿ ಅಂತಿಮ ವಿಜಯದ ಕಹಳೆಯನ್ನು ಮೊಳಗಿಸಿದ್ದೇನೆ.

7. ಸಂಘಟನೆಯಲ್ಲಿ ಮನಸ್ಸಿನಿಂದ ಅಂತಿಮ ಆಹುತಿ ಮಾಡಿರುವ ನನಗೆ ಪಂಚ ತತ್ವಗಳು ಸಫಲತಾ ಮಾಲೆಯನ್ನು ಹಾಕಿ ಸಂತೋಷದ ಕಹಳೆಯನ್ನು ಮೊಳಗಿಸಿವೆ.

8. ನಾನು ಭಕ್ತಾತ್ಮರಿಗೆ, ಜ್ಞಾನಿ ಆತ್ಮರಿಗೆ, ಸರ್ವಾತ್ಮರಿಗೆ ವರದಾನವನ್ನು ಕೊಟ್ಟು ವರದಾನ ಮೂರ್ತಿ, ಕಾಮಧೇನು ಆಗಿದ್ದೇನೆ.

9. ನಾನು ಯಾವ ಆತ್ಮ ಏನು ಬೇಡಿದರೂ 'ತಥಾಸ್ತು' ಎಂಬ ವರದಾನವನ್ನು ಕೊಡುತ್ತಾ ಸಮೀಪ ಮತ್ತು ಜೊತೆ ಇದ್ದೇನೆ.